

ಸುಳ್ಯಾರ ಮಕ್ಕ ಸಲುವಾಗೇ ನಮ್ ಮನಿ ಸಂಸಾರ ಆಳ್ಯಾಗ್ಯಾದ. ಮತ್ ಹಿಂದಲೇ ಮಗ್ಳನ ಬ್ಯಾರೆ ಇದೇ ದಂದ್ಯಾಕ ತಯ್ಯಾರ ಮಾಡ್ಯಾಳ. ಇನ್ನೆಷ್ಟ್ ಮನಿ ಹಾಳ್ ಮಾಡ್ಬೇಕ್ ಅಂತ ಮಾಡ್ಯಾಳ ಈ ಸಣ್ಣ ಜ್ಯಾತ್ಯಾಕಿ. ನಮ್ ಕುಲ್ದ ಮರ್ಯಾದಿ, ಮನಿ ಮರ್ಯಾದಿ ಉಳ್ಸಲಿಲ್ಲ ಅಂದ್ರsss ನಂಗ್ ಮಂದಿ ಚೀಲ್ಯಾ ಅಂತಾರ ಅಂತ್ಹೇಳಿ. ಹಳ್ಳಕ್ ಬಟ್ಟಿ ತೊಳ್ಯಾಕ ಹೋದ ಜಗದ ಮಲ್ಲವ್ವನ ಮಗ್ಳು ಮರೆವ್ವನ ಕೆಡಿಸ್ಯಾನ. ಮರ್ಯಾದಿಗಿ ಅಂಜಿ ಮಲ್ಲವ್ವ ಎಣ್ಣಿ ಕುಡ್ದು ಸತ್ತಾಳ್ವಾsss. ಅದ್ಕೆ ಈಗಿನ ಕಾಲ್ಮಾನ ಸೂಕ್ಷ್ಮಾವಂತನೇ ನಿಂಗ್ ಜಲ್ದಿ ಮಾಡಿದ್ವಿ' ಅಂದು ಆಚಿ ಓಣಿ ದಾರಿ ಇಡ್ದಳು.

ಹೊತ್ತೇರಿದೆಂಗೆಲ್ಲ ಓಣಿಗಿ ಓಣಿನೇ ಗಪ್‌ಚುಪ್, ಅಲ್ಲಲ್ಲಿ ಒಂದಿಬ್ರೂ ಪೊಲೀಸ್ರು ಬಡ್ಗಿ ಇಡ್ಕೊಂಡು ನಿಂತಿದ್ರು. ಕೆಂಚಮ್ಮನ ಗುಡಿಮುಂದ ಎರ್ಡು ಪೊಲೀಸ್ರ ಜೀಪ್ ನಿಂತಿದ್ವು. ಗುಂಪು ಗುಂಪಾಗಿ ನಿಂತಿದ್ದ ಮಂದೀನ ನೋಡ್ಕೋತ ತಿಪ್ಪಣ್ಣ, ಮಗ್ನ ಎಡಗೈ ಹಿಡ್ಕೊಂಡು ಊರಾಕ ಹೊಂಟಿದ್ದ. ಆದ್ರ ಮಗ್ನ ನೆದ್ರ ಮಾತ್ರ ಜಗದ ಮಲ್ಲವ್ವನ ಮನಿ ಮುಂದ ಬಿದ್ದಿದ್ದ ನಾಲಿನ ಕಾಲ್ಮರಿ ಮ್ಯಾಲಿತ್ತು. ಊರಗ್ಸಿ ದಾಟಿ ನಡುಕ ಊರೊಳ್ಗ ಹೋಗ್ತಿದ್ದಂಗೆ ಮಗ 'ಯಪ್ಪ ಈ ಓಣಿ ಎಷ್ಟ್ ಸ್ವಚ್ಛಾದಲ್ಲ, ನಮ್ಮೋಣ್ಯಾಗ ಬರೀ ಊರ್ ಚರಂಡಿ ನೀರ್! ಬಚ್ಚಲ ನೀರ್ ರೋಡ್‌ಗೆ ಹಾಯ್ತುವ, ಮಳಿಗಾಲದಾಗಂತ್ರು ಇಡೀ ಓಣಿಗಿ ಓಣಿನೇ ಗಬ್ಬ್ ನಾರ್ತದ ಅಂದ. ತಂದಿ 'ಅದ್ಕೆಪಾ..! ಚಂದ್ ಸಾಲಿ ಕಲ್ತೆಂದ್ರ. ಹಿಂಗ್ ಚಂದ್ ಮನಿ ಕಟ್ಕೊಂಡು ಓಣ್ಯಾಗ ರಾಜನ್‌ತರ ಇರಬಹುದು' ಇಷ್ಟ್ ಹೇಳದ್ರಾಗ ಜಕಾತಿ ಸೌಕಾರ್ನ ಮನಿ ಬಂತು. 'ಯವ್ವಾ! ಗೌಡ್ಸಾನಿ ಅಪ್ಪ ಸೌಕಾರ್ ಇಲ್ಲೇನ್ರಿ.' ಎಂದು ತಿಪ್ಪಣ್ಣ ಕೇಳಿದ.ದನಿ ಕೇಳಿದ ಗೌಡ್ತಿ, ರೊಟ್ಟಿ ಮಾಡದ್ ಬಿಟ್ಟ್ ಹರ್ಗ ಬಂದ. 'ತಿಪ್ಪಾsss... ಯಾಕಲೋ ಬಂದಿsss'.'ಎವ್ವ ಅಪ್ನ